# ಕರ್ನಾಟಕ ವಿಧಾನಸಭೆ

## 141ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 333 (455)

ಸದಸ್ಯರ ಹೆಸರು : ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 23-09-2020

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರವಾಹದ ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಿಂದ 4ಜಿ ವಿನಾಯಿತಿ ನೀಡಲಾಗಿದೆಯೇ; | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ರಸ್ತೆ / ಸೇತುವೆಗಳನ್ನು ದುರಸ್ಥಿಪಡಿಸುವ ಕಾಮಗಾರಿಗನ್ನು ಕೈಗೆತ್ತಿಕೊಳ್ಳಲು 4ಜಿ ಅಡಿ ವಿನಾಯಿತಿ ನೀಡಿರುವುದಿಲ್ಲ. |
| ಆ) | ಹಾಗಿದ್ದಲ್ಲಿ; ಎಷ್ಟು ಕಾಮಗಾರಿಗಳಿಗೆ 4ಜಿ ವಿನಾಯಿತಿ ನೀಡಲಾಗಿದೆ; ಇದರ ಮೊತ್ತವೆಷ್ಟು | ಆದರೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ರಸ್ತೆ / ಸೇತುವೆಗಳನ್ನು ದುರಸ್ಥಿಪಡಿಸುವ ಕಾಮಗಾರಿಗನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಸೆಕ್ಷನ್ 4ಎ ರಡಿ ವಿನಾಯಿತಿ ನೀಡಲಾಗಿದೆ. ಸದರಿ ಕಾಮಗಾರಿಗಳ ಸಂಖ್ಯೆ ಹಾಗೂ ಅಂದಾಜು ಮೊತ್ತದ ವಲಯವಾರು ವಿವರಗಳು ಈ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ) |

| ಕ್ರ ಸಂ | ವಲಯ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ |
|---|---|---|---|
| 1 | ದಕ್ಷಿಣ | 297 | 9112.72 |
| 2 | ಕೇಂದ್ರ | 637 | 10870.74 |
| 3 | ರಾಷ್ಟ್ರೀಯ ಹೆದ್ದಾರಿ | 14 | 374.25 |
| | **ಒಟ್ಟು** | **948** | **20357.71** |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಇ) | 4ಜಿ ವಿನಾಯಿತಿ ನೀಡಿದ ಕಾಮಗಾರಿಗಳು ಸಂಪೂರ್ಣವಾಗಿವೆಯೇ, ಇಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು? | ಮೇಲ್ಕಂಡಂತೆ 948 ಕಾಮಗಾರಿಗಳ ಪೈಕಿ 947 ಕಾಮಗಾರಿಗಳು ಪೂರ್ಣಗೊಂಡಿದ್ದು, 1 ರಸ್ತೆ ಕಾಮಗಾರಿಯು ಕೋವಿಡ್-19 ಹಾಗೂ ಮಳೆಯಿಂದಾಗಿ ವಿಳಂಬವಾಗಿದ್ದು, ಪ್ರಸ್ತುತ ಡಾಂಬರೀಕರಣ ಹಂತದ ಕೆಲಸ ಪ್ರಗತಿಯಲ್ಲಿರುತ್ತದೆ. |

ಸಂ:ಲೋಇ/603/ಐಎಫ್ಎ/2020 (ಇ-ಕಛೇರಿ)

(ಗೋವಿಂದ ಎಂ. ಕಾರಜೋಳ)
ಉಪಮುಖ್ಯಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು